T. D. B. High School Building at Hampapur

779. Sri M. BASAVARAJU (K. R. Nagar).—

Will the Minister for revenue be pleased to state :—

(*a*) whether there was any proposal to construct T. D. B. High School building at Hampapur near the Harijan Colony ;

(*b*) whether it is a fact that at the request of the local Harijans and the recommendation of Revenue Officers, the Government ordered for acquisition of the land in question for Harijan Colony ?

Sri H. V. KOUJALGI (Minister for Revenue).—

(*a*) Yes.

(*b*) Yes ; later on further consideration of the matter, the Deputy Commissioner was asked to suggest some other suitable site for Harijan Colony. But it was finally decided to leave the question of construction of the High School on the site in question to be decided by the reconstituted Taluk Board, K. R. Nagar.

ಶ್ರೀ ಎಂ. ಬಸವರಾಜು.—ಸ್ವಾಮಿ ಹಂಪಾಪುರದಲ್ಲಿನ ಹರಿಜನರ ಕಾಲೋನಿಯ ಬಳಿ ಇರ ತಕ್ಕಂಥ ಜಮೀನನ್ನು ಹರಿಜನರ ಕಾಲೋನಿಗೆ ಅಕ್ವೈರ್ ಮಾಡಿಕೊಳ್ಳಬೇಕೆಂದು ಸರ್ಕಾರ ದಿಂದ ಅಪ್ರೂವ್ ಆಗಿದ್ದರೂ ಸಹ ಆ ಜಮೀನನ್ನು ಹರಿಜನರ ಕಾಲೋನಿಗೆ ಅಕ್ವೈರ್ ಮಾಡಿಕೊಳ್ಳದೇ ಇರುವುದಕ್ಕೆ ಕಾರಣವೇನು ?

ಶ್ರೀ ಎಚ್. ವಿ. ಕೌಜಲಗಿ.—ಆ ಜಮೀನಿನಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ಒಂದು ಪ್ರೌಢಶಾಲೆಯನ್ನು ಕಟ್ಟಬೇಕು ಎಂದಿದ್ದಾರೆ. ಕೆಲವರು ಹರಿಜನ ಕಾಲೋನಿಯನ್ನು ಮಾಡ ಬೇಕೆಂದಿದ್ದಾರೆ. ಅಲ್ಲಿ ಪ್ರೌಢಶಾಲೆಯನ್ನು ನಿರ್ಮಿಸುವ ಬಗ್ಗೆ ತಾಲ್ಲೂಕುಡೆವಲಪ್ ಮೆಂಟ್ ಬೋರ್ಡಿನವರು ಅಂತಿಮವಾಗಿ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಎಂ. ಬಸವರಾಜು.—ಅಲ್ಲಿ ಕೆಲವು ಸವರ್ಣೀಯರು ವೆಸ್ಟೆಡ್ ಇಂಟರೆಸ್ಟಿನಿಂದ ಹರಿಜನ ಕಾಲೋನಿಯನ್ನು ಮಾಡುವುದಕ್ಕೆ ಅಡ್ಡಿಮಾಡುತ್ತಿದ್ದಾರೆ. ಅದಕ್ಕೆ ಸಂಬಂಧಪಟ್ಟವರೇ ತಾಲ್ಲೂಕು ಅಭಿವೃದ್ಧಿ ಮಂಡಲಿಯಲ್ಲಿರುವುದರಿಂದ ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ಆ ಬಗ್ಗೆ ಗಮನ ಕೊಡುತ್ತಿಲ್ಲ. ಆದಕಾರಣ ಸರ್ಕಾರದವರೇ ಅದಕ್ಕೆ ಗಮನ ಕೊಟ್ಟು ಆ ಜಮೀನಿನಲ್ಲಿ ಹರಿಜನರ ಕಾಲೋನಿಗೋಸ್ಕರ ಲ್ಯಾಂಡ್ ಅಕ್ವೈರ್ ಮಾಡಲು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಆ ಜಮೀನನ್ನು ಅಕ್ವೈರ್ ಮಾಡಿಕೊಂಡು ಅದರಲ್ಲಿ ಹರಿಜನರ ಕಾಲೋನಿಯನ್ನು ಮಾಡಬೇಕು ಅಥವಾ ಹೈಸ್ಕೂಲು ಕಟ್ಟಬೇಕು ಎನ್ನುವ ತೀರ್ಮಾನ ತೆಗೆದು ಕೊಳ್ಳುವುದು ತಾಲ್ಲೂಕು ಬೋರ್ಡಿನವರಿಗೆ ಸೇರಿದ್ದು. ಅದು ಸರ್ಕಾರದ್ದಲ್ಲ.

ಶ್ರೀ ಎಂ. ಬಸವರಾಜು.—ಆ ತಾಲ್ಲೂಕು ಬೋರ್ಡಿನಲ್ಲಿ ಹರಿಜನ ಸದಸ್ಯರು ಇಬ್ಬರು ಮಾತ್ರ ಇರುವುದರಿಂದ ಅವರ ಮಾತು ಅಲ್ಲಿ ನಡೆಯುವುದಿಲ್ಲ. ಆದ್ದರಿಂದ ಆ ವಿಚಾರದಲ್ಲಿ ಸರ್ಕಾರದವರು ಇಂಟರ್‌ಫಿಯರ್ ಆಗಿ ಆ ಜಮೀನನ್ನು ಹರಿಜನ ಕಾಲೋನಿಗಾಗಿ ಅಕ್ವೈರ್ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಅದು ತಾಲ್ಲೂಕು ಬೋರ್ಡಿನವರ ಜಾಗ. ಅದರಲ್ಲಿ ಸರ್ಕಾರ ಕೈ ಹಾಕುವುದಕ್ಕೆ ಹೇಗೆ ಸಾಧ್ಯ ?